# ನಿತ್ಯ-ಅನಿತ್ಯ ವಿವೇಕ



ಈ ಜಗತ್ತು ಎಷ್ಟು ಅನಿತ್ಯವಾದ್ದು ಎಂಬುದನ್ನು ನೀವು ನಿಮ್ಮ ಸ್ವಂತ ಅನುಭವದಿಂದಲೆ ಅರಿತುಕೊಂಡಿದ್ದೀರಿ. ಈ ದೃಷ್ಟಿಯಿಂದ ಅದನ್ನು ನೋಡಿ. ಎಷ್ಟೊಂದು ಜನ ಈ ಜಗತ್ತಿನಲ್ಲಿ ಹುಟ್ಟಿ ಸತ್ತಿದ್ದಾರೆ! ಜನ ಹುಟ್ಟುತ್ತಾರೆ ಮತ್ತು ಸಾಯುತ್ತಾರೆ. ಈ ಜಗತ್ತು ಈಗಿದೆ, ಈಗಿಲ್ಲ. ಅನಿತ್ಯವಾದ್ದು. ಯಾರನ್ನು 'ನನ್ನವರು, ನನ್ನವರು' ಅನ್ನುತ್ತಿದ್ದೀರೊ, ನೀವು ಸಾಯುವಾಗ ಕಣ್ಣು ಮುಚ್ಚಿದೊಡನೆಯೆ ಯಾರೂ ಜೊತೆಯಲ್ಲಿ ಬರುವುದಿಲ್ಲ. ಕೆಲವರಿಗೆ ಹತ್ತಿರದ ಸಂಬಂಧಿಗಳು ಯಾರೂ ಇಲ್ಲದಿದ್ದರೂ, ಅವರು ತಮ್ಮ ಮೊಮ್ಮಕ್ಕಳ ಸಲುವಾಗಿ ಕಾಶಿಗೆ ಹೋಗಲಾಗುವುದಿಲ್ಲ. ''ನಮ್ಮ 'ಹಾರು'ವಿನ ಗತಿ ಏನಾಗಿಬಿಡುತ್ತದೊ ಬಳಿಕ?'' ಅಂತ ವಾದಿಸುತ್ತಾರೆ. 'ಬಂದು ಹೋಗಲು ಮಾರ್ಗವಿದೆ. ಆದರೂ ಮೀನು ಬೋನಿನಿಂದ ತಪ್ಪಿಸಿಕೊಂಡು ಹೋಗದು.' ರೇಷ್ಮೆಹುಳು ತನ್ನನ್ನು ತಾನೇ ಬಂಧಿಸಿಕೊಂಡು, ತಾನಾಗಿಯೇ ಸಾಯುತ್ತದೆ. ಈ ರೀತಿಯ ಈ ಜಗತ್ತು ಮಿಥ್ಯೆ , ಅನಿತ್ಯ.

ಭಗವಂತನೊಬ್ಬನೇ ಸತ್, ಉಳಿದುದೆಲ್ಲಾ ಅಸತ್ ಎಂಬ ವಿಚಾರ. ಸತ್ ಎಂದರೆ ನಿತ್ಯವಾದ್ದು, ಅಸತ್ ಎಂದರೆ ಅನಿತ್ಯವಾದ್ದು. ಯಾರು ವಿವೇಕವನ್ನು ಗಳಿಸಿಕೊಂಡಿದ್ದಾರೊ ಅವರಿಗೆ ಗೊತ್ತಿದೆ ಭಗವಂತನೊಬ್ಬನೇ ವಸ್ತು ಉಳಿದುದೆಲ್ಲಾ ಅವಸ್ತು ಎಂದು. ವಿವೇಕ ಉದಯವಾಯಿತು ಎಂದರೆ, ಭಗವಂತನನ್ನು ಅರಿಯಬೇಕು ಎಂಬ ಇಚ್ಛೆಯಾಗುತ್ತದೆ. ಅಸತ್ ವಸ್ತುಗಳನ್ನು ಎಂದರೆ ದೇಹಸುಖ, ಲೋಕಮಾನ್ಯತೆ, ಹಣ ಇವೇ ಮೊದಲಾದುವುಗಳನ್ನು ಪ್ರೀತಿಸಿದರೆ, ಸತ್ಸ್ವರೂಪನಾದ ಭಗವಂತನನ್ನು ಅರಿಯಲು ಇಚ್ಛೆಯುಂಟಾಗುವುದಿಲ್ಲ. ಸದ್ವಿಚಾರ ಬಂದ ಮೇಲೇನೆ ಭಗವಂತನನ್ನು ಅರಿಯಲು ಇಚ್ಛೆಯುಂಟಾಗುತ್ತದೆ.

ಅನೇಕ ಶಾಸ್ತ್ರಗಳ ಪರಿಚಯಮಾಡಿಕೊಂಡಿದ್ದರೆ ಏನು ಬಂತು? ಭವನದಿಯನ್ನು ದಾಟುವುದು ಹೇಗೆ ಎಂಬುದನ್ನು ಅವಶ್ಯವಾಗಿ ಅರಿತುಕೊಳ್ಳಬೇಕು. ಭಗವಂತನೇ ವಸ್ತು, ಉಳಿದುದೆಲ್ಲಾ ಅವಸ್ತು.

ಯಾರ ದೃಷ್ಟಿಗೆ ಕೇವಲ ಭಗವಂತನೇ ವಸ್ತು, ಉಳಿದುದೆಲ್ಲಾ ಅವಸ್ತು ಎಂದು ಕಾಣಬರುವುದೋ ಆತನೇ ನಿಜವಾದ ಬುದ್ಧಿವಂತ. ಉಳಿದ ವಿಷಯಗಳ ಸುದ್ದಿ ಸಮಾಚಾರ ನಮಗೇಕೆ? ಹನುಮಂತ ಒಮ್ಮೆ ಹೇಳಿದ: ''ನನಗೆ ತಿಥಿ, ವಾರ, ನಕ್ಷತ್ರ - ಇವುಗಳ ವಿಷಯವಾಗಿ ಏನೂ ಗೊತ್ತಿಲ್ಲ. ಕೇವಲ ರಾಮ ಚಿಂತನೆ ಮಾಡುತ್ತಿದ್ದೇನೆ.''

ಈ ಶರೀರ ಎರಡು ದಿನದ್ದು. ಭಗವಂತನೇ ಸತ್ಯ. ಶರೀರ ಈಗಿದ್ದುದು ಈಗಿರದು. ಅನೇಕ ವರ್ಷಗಳ ಹಿಂದೆ ನಾನು ಅಗ್ನಿಮಾಂದ್ಯದಿಂದ ಬಹಳವಾಗಿ ನರಳುತ್ತಿದ್ದಾಗ ಹೃದೆ ನನಗೆ ಸಲಹೆ ಇತ್ತ: ''ಭಗವತಿಗೆ ಒಮ್ಮೆ ಪ್ರಾರ್ಥನೆ ಮಾಡಿ-ಗುಣಪಡಿಸಿಕೊಡಬೇಕೆಂದು.'' ನನ್ನ ರೋಗವನ್ನು ಗುಣಪಡಿಸಿಕೊಡಬೇಕೆಂದು ಆಕೆಯನ್ನು ಕೇಳಿಕೊಳ್ಳಲು ನನಗೆ ನಾಚಿಕೆಯಾಯಿತು.

ಭಗವಂತ ಮತ್ತು ಆತನ ಐಶ್ವರ್ಯ. ಭಗವಂತನೇ ಸತ್ಯ: ಆತನ ಐಶ್ವರ್ಯ ಎರಡು ದಿನದ್ದು. ಐಂದ್ರಜಾಲಿಕ ಮತ್ತು ಆತನ ಇಂದ್ರಜಾಲ. ಇಂದ್ರಜಾಲವನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾಗಿಬಿಡುತ್ತಾರೆ. ಆದರೆ ಅವೆಲ್ಲಾ ಮಿಥ್ಯೆ. ಐಂದ್ರಜಾಲಿಕನೇ ಸತ್ಯ. ಯಜಮಾನ ಮತ್ತು ಆತನ ತೋಟ. ಜನರಿಗೆ ತೋಟದ ಕಡೆಯೇ ದೃಷ್ಟಿ; ಆದರೆ ತೋಟದ ಯಜಮಾನನನ್ನು ಪತ್ತೆ ಮಾಡಿಕೊಳ್ಳಬೇಕು.

ತ್ಯಾಗ ಮಾಡಬೇಕಾಗಿದ್ದರೆ ಭಗವಂತನನ್ನು ಮನಶ್ಶಕ್ತಿಗಾಗಿ ಪ್ರಾರ್ಥನೆ ಮಾಡಬೇಕು. ಯಾವುದು ಮಿಥ್ಯೆಯೆಂದು ತೋರುವುದೋ ಅದನ್ನು ಕೂಡಲೇ ತ್ಯಜಿಸಿಬಿಡಬೇಕು. ಹಿಂದಿನ ಋಷಿಗಳಿಗೆ ಈ ವಿಧದ ಮನೋಬಲವಿತ್ತು. ಈ ಮನೋಬಲದಿಂದ ಅವರು ಇಂದ್ರಿಯಗಳನ್ನು ಜಯಿಸಿದ್ದರು. ಆಮೆ ಒಮ್ಮೆಯೇನಾದರೂ ತನ್ನ ಕೈಕಾಲುಗಳನ್ನು ಒಳಕ್ಕೆ ಎಳೆದುಕೊಂಡಿತು ಎಂದರೆ, ಅದನ್ನು ನಾಲ್ಕು ಹೋಳಾಗಿ ಕತ್ತರಿಸಿದರೂ ಅದು ಅವನ್ನು ಹೊರಕ್ಕೆ ಬಿಡದು.

ವೇದಾಂತದೃಷ್ಟಿಯಿಂದ ಬ್ರಹ್ಮ ಮಾತ್ರವೇ ವಸ್ತು, ಉಳಿದುದೆಲ್ಲಾ ಮಾಯೆ; ಸ್ವಪ್ನವಿದ್ದ ಹಾಗೆ, ಅವಸ್ತು. 'ಅಹಂ' ಎಂಬ ಕೋಲು ಸಚ್ಚಿದಾನಂದಸಾಗರದ ಮಧ್ಯದಲ್ಲಿ ಬಿದ್ದಿದೆ. (ಮಾಸ್ಟರಿಗೆ) ನಾನು ಹೇಳುವುದರ ಕಡೆ ಲಕ್ಷ್ಯವಿಟ್ಟು ಕೇಳು. 'ಅಹಂ' ಎಂಬ ಕೋಲನ್ನು ತೆಗೆದುಹಾಕಿಬಿಟ್ಟಿದ್ದೇ ಆದರೆ ಇನ್ನು ಉಳಿದುಕೊಳ್ಳುವುದು ಆ ಅಖಂಡ ಸಚ್ಚಿದಾನಂದ ಸಾಗರ. ಆದರೆ 'ಅಹಂ' ಎಂಬ ಕೋಲು ಅಲ್ಲಿ ಬಿದ್ದಿರುವವರೆಗೆ ಸಾಗರ ಎರಡಾಗಿ ಕಾಣಬರುತ್ತದೆ - ಈ ಕಡೆ ಒಂದು ಭಾಗ, ಆ ಕಡೆ ಒಂದು ಭಾಗ ಇರುವಂತೆ. ಬ್ರಹ್ಮಜ್ಞಾನ ದೊರೆತೊಡನೆಯೇ ಮನುಷ್ಯ ಸಮಾಧಿಸ್ಥನಾಗುತ್ತಾನೆ. ಆಗ ಈ 'ಅಹಂ' ಎಂಬುದು ನಿರ್ನಾಮವಾಗುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ